(ಈ) ಭದ್ರಾವತಿ ಮತ್ತು ಶಿವಮೊಗ್ಗ ತಾಲ್ಲೂಕಿನ ಕೆಲವು ಹಳ್ಳಿಗಳು ಗ್ರಾಮಪಂಚಾಯಿತಿಗೂ, ನಗರಸಭೆಗೂ ಮತ್ತು ಪುರಸಭೆಗೂ ಸೇರಿಲ್ಲವಾದ್ದರಿಂದ ಅಭಿವೃದ್ಧಿ ಕಾರ್ಯಗಳಿಗೆ ತೊಂದರೆ.

ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಅಧ್ಯಕ್ಷರೆ, ನಮ್ಮ ಭಾಗದಲ್ಲಿ ಕೆಲವು ಗ್ರಾಮಗಳು ನಗರ ಸಭೆಯ ವ್ಯಾಪ್ತಿಗೂ ಬರುವುದಿಲ್ಲ, ತಾಲ್ಲೂಕು ಪಂಚಾಯಿತಿ ವ್ಯಾಪ್ತಿಗೂ ಬರುವುದಿಲ್ಲ. ಈ ರೀತಿ ಅನೇಕ ಗ್ರಾಮಗಳಿವೆ. ಶಿವಮೊಗ್ಗ ತಾಲ್ಲೂಕಿನ ತುಬಂಳ್ಳಿ, ಭದ್ರಾವತಿ ತಾಲ್ಲೂಕಿನ ಒರಿಯೂರು ಮತ್ತು ನಂಜಾಪುರ ಗ್ರಾಮದ 200-300 ಜನ ರೈತರು ಬಂದಿದ್ದಾರೆ. ಹಾಗಾಗಿ ಅವು ಆ ಒಂದು ಗ್ರಾಮ ಪಂಚಾಯಿತಿಗೆ ಬಾರದೆ ಇರುವುದರಿಂದ, ಜಿಲ್ಲಾ ಪಂಚಾಯಿತಿಗೆ ಚುನಾವಣೆ ನಡೆಯುವತನಕ ಅಭಿವೃದ್ಧಿ ಕಾರ್ಯಗಳನ್ನು ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸಚಿವರು) : ಮಾನ್ಯ ಅಧ್ಯಕ್ಷರೆ, ಭದ್ರಾವತಿ ಮತ್ತು ಶಿವಮೊಗ್ಗ ತಾಲ್ಲೂಕಿನ ಕೆಲವು ಹಳ್ಳಿಗಳು ಗ್ರಾಮ ಪಂಚಾಯಿತಿಗೂ ಸೇರಿಲ್ಲ, ನಗರಸಭೆಗೂ ಸೇರಿಲ್ಲ, ಪುರಸಭೆಗೂ ಸೇರಿಲ್ಲ. ಹಾಗಾಗಿ ಅವುಗಳ ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡಿವೆ ಎಂಬುದು ನಿಜ. ಆ ಕೆಲಸಗಳನ್ನು ಜಿಲ್ಲಾ ಪಂಚಾಯಿತಿಯ ಮತಿಯಿಂದ ತೆಗೆದುಕೊಳ್ಳುವುದರಲ್ಲಿ ಏನು ಅಭ್ಯಂತರವಿಲ್ಲ.

ಊ) ಪಶುಸಂಗೋಪನಾ ಇಲಾಖೆಯವರಿಂದ ಜಾನುವಾರುಗಳಿಗೆ ಸಮೃದ್ಧಿ ವೀರ್ಯ ಒದಗಿಸಲು ಒತ್ತಾಯ

ಶ್ರೀ ಶ್ರೀಕಾಂತ ರುದ್ರಪ್ಪ ಅಂಬಡಗಟ್ಟಿ (ಧಾರವಾಡ) : ಸನ್ಮಾನ್ಯ ಅಧ್ಯಕ್ಷರೆ, ಹಳ್ಳಿಗಾಡುಗಳಲ್ಲಿ ಬಹಳಷ್ಟು ಕುಟುಂಬಗಳು, ತಮ್ಮ ಕುಟುಂಬ ನಿರ್ವಹಣೆಗೆ ಜಾನುವಾರುಗಳನ್ನು ಸಾಕಿಕೊಂಡು ಜೀವನ ಮಾಡುತ್ತಿದ್ದಾರೆ. ಮತ್ತು ಪಟ್ಟಣಗಳಲ್ಲಿ ತಮ್ಮ ಆದಾಯಗಳನ್ನು ಹೆಚ್ಚಿಸಿಕೊಳ್ಳಲು ಪಶುಂಗೋಪನೆಯನ್ನು ಕೂಡ ಅವಲಂಬಿಸಿರುತ್ತಾರೆ. ಆದರೆ ಈ ಅವಲಂಬಿತರಾಗಿರುವವರಿಗೆ ಐ.ಆರ್. ಡಿ.ಪಿ.ಸ್ಕೀಮ್, ಪ್ರಧಾನ ಮಂತ್ರಿಗಳ ರೋಜಗಾರ್ ಯೋಜನೆ ಅಡಿಯಲ್ಲಿ ಅಥವಾ ಕೇಂದ್ರ ಸರ್ಕಾರದ ನೆರವಿನಿಂದಾಗಲಿ ಸಾಕಷ್ಟು ಜಾನುವಾರುಗಳನ್ನು ಖರೀದಿ ಮಾಡಿದ್ದರೂ ಕೂಡ, ಈ ಪಶುಸಂಗೋಪನೆ ಇಲಾಖೆಯವರು "ಕೃತಕ ಗರ್ಭದಾರಣೆ" ಏನು ಪೂರೈಸುತ್ತಿದ್ದಾರೆ, ಅದರಲ್ಲಿ ಇರುವಂಥ ದೋಷದಿಂದಾಗಿ 3-4ಸಲ ಇಂಜೆಕ್ಷನ್ ಮಾಡಿಸಿದರೂ ಕೂಡಾ ಗರ್ಭಕಟ್ಟದಂಥ ಪರಿಸ್ಥಿತಿಯಾಗಿ ಜಾನುವಾರುಗಳು ಬರಡಾಗಿವೆ. ಮೇಲಾಗಿ ಅಕ್ಟೋಬರ್ 1996ರಿಂದ ಸರ್ಕಾರದವರು ಇಂಜಕ್ಷನ್‌ಗೋಸ್ಕರ ಪ್ರತಿಯೊಂದು ಜಾನುವಾರುಗಳಿಗೆ 5 ರೂಪಾಯಿ ಚಾರ್ಜ ಮಾಡುತ್ತಾರೆ. ರೈತರಿಗೆ 5 ರೂಪಾಯಿ ಕೊಡುವುದರ ಜೊತೆಗೆ 4-5 ಸಾರಿ ಕೊಡಿಸುವುದರಿಂದ ಬಹಳಷ್ಟು ಹೊರೆಯಾಗುತ್ತದೆ. ಬ್ಯಾಂಕಿನಲ್ಲಿ ಸಾಲ ಕಟ್ಟುವುದಕ್ಕೆ ಬಹಳ ತೊಂದರೆಯಾಗುತ್ತದೆ. ಪ್ರಕೃತಿ ವಿಕೋಪದಿಂದ ಬೆಲೆ ಬರದಂಥ ಪರಿಸ್ಥಿತಿಯಲ್ಲಿ ರೈತರಿಗೆ ಸಾಕಷ್ಟು ಸರ್ಕಾರದವರು ಸಹಾಯ ಮಾಡುತ್ತಾರೆ. ಆದರೆ ಈ ಬಡ ಕುಟುಂಬಗಳಲ್ಲಿ ಯಾರು ಈ ಪಶುಸಂಗೋಪನೆ ಮೇಲೆ ತಮ್ಮ ಜೀವನವನ್ನು ನಿರ್ವಹಣೆ ಮಾಡುತ್ತಿದ್ದಾರೆ, ಅವರಿಗೆ ಸಾಕಷ್ಟು

ಹಾನಿಯಾಗುತ್ತದೆ. ಅದಕ್ಕಾಗಿ ಸರ್ಕಾರದವರು ಒಳ್ಳೆಯ ವೀರ್ಯವನ್ನು ಪೂರೈಸಿ ಯಾವ ರೀತಿ ಕಾರ್ಯ ನಿರ್ವಹಣೆ ಮಾಡುತ್ತಾರೆಂಬುದನ್ನು ಹೇಳಬೇಕು.

ಶ್ರೀ ಜಿ.ಜಿ. ನಿಂಗಯ್ಯ (ಪಶುಸಂಗೋಪನೆ ಸಚಿವರು) : ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ ಹಿಂದೆ ಈ ರಾಜ್ಯದಲ್ಲಿ ನಾವು ಪ್ರತಿಯೊಂದು ಜಾನುವಾರಿಗೆ ಫ್ರೀಯಾಗಿ ಕೊಡುತ್ತಿದ್ದೆವು. ಆದರೆ ಈಗ ಈ ಕಾರ್ಯವನ್ನು ಹಿಮ್ಮ ಪರಿಣಾಮಕಾರಿಯಾಗಿ ಮಾಡುವ ದೃಷ್ಟಿಯಿಂದ 5 ರೂಪಾಯಿ ಚಾರ್ಜ್ ಮಾಡುತ್ತಿದ್ದೇವೆ ಆದರೆ ಈ ರಾಜ್ಯದಲ್ಲಿ ಒಂದೇ ಅಲ್ಲ, ಆಂಧ್ರ ಪ್ರದೇಶದಲ್ಲಿ 10 ರೂಪಾಯಿ ಚಾರ್ಜ್ ಮಾಡುತ್ತಾರೆ. ಕೇರಳದಲ್ಲಿ 20 ರೂಪಾಯಿ ಚಾರ್ಜ್ ಮಾಡುತ್ತಾರೆ. ತಮಿಳುನಾಡಿನಲ್ಲಿ 15 ರೂಪಾಯಿ ಚಾರ್ಜ್ ಮಾಡುತ್ತಾರೆ. ಯಾವುದೇ ರಾಜ್ಯದಲ್ಲಿ ಅದಕ್ಕಿಂತ ಕಡಿಮೆ ಚಾರ್ಜ್ ಮಾಡುವುದಿಲ್ಲ. ಹಾಗೆ ಚಾರ್ಜ್ ಮಾಡತಕ್ಕಂಥ ಸಂದರ್ಭದಲ್ಲಿ ಮಿಶ್ರತಳಿ ವರ್ಧನೆಗಾಗಿ ನಾವು ಎಸ್.ಡಿ.ಡಿ.ಪಿ. ಯಿಂದ ಸೌಲಭ್ಯ ಸಲುವಾಗಿ ಗ್ರ್ಯಾಂಟ್ಸನ್ನು ಕೇಳಿದ್ದೇವೆ. ಅವರು ಈಗಾಗಲೇ 4 ಕೋಟಿ ರೂಪಾಯಿಗಳನ್ನು ಕೊಡುವುದಕ್ಕೆ ಒಪ್ಪಿ ಒಂದು ಷರತ್ತನ್ನು ಹಾಕಿದ್ದಾರೆ. ಎಲ್ಲ ರಾಜ್ಯದಲ್ಲಿ ಚಾರ್ಜ್ ಮಾಡುತ್ತಾರೆ. ನಿಮ್ಮಲ್ಲಿ ಚಾರ್ಜ್ ಮಾಡುವುದಿಲ್ಲ. ನೀವು ಚಾರ್ಜ್ ಮಾಡುವುದಾದರೆ ಮಾತ್ರ ಕೊಡುತ್ತೇವೆ ಎಂದು ಹೇಳಿದ್ದರು. ಆದರೆ ಬೇರೆ ರಾಜ್ಯಕ್ಕಿಂತ ನಮ್ಮಲ್ಲಿ ಕಡಿಮೆ ಚಾರ್ಜ್ ಮಾಡುತ್ತೇವೆ.

ಅಧ್ಯಕ್ಷರು : ಇಲ್ಲಿ ತೊಂದರೆ ಏನಾಗುತ್ತದೆಂದರೆ, ಈ ಟೆಸ್ಟಿಂಗ್ ಮಾಡುವವರಿಗೆ ಟ್ರೈನಿಂಗ್ ಕೊಡುತ್ತಾರಲ್ಲ ಆ ಟ್ರೈನಿಂಗ್ ಅವರಿಗೆ ಸರಿಯಾಗಿ ಆಗಿದೆಯೋ ಇಲ್ಲವೋ ಗೊತ್ತಿಲ್ಲ. ಎರಡನೆಯದು ಸೆಮನನ್ನು ಯಾವ ಸ್ಥಿತಿಯಲ್ಲಿ ತರುತ್ತಾರೊ ಗೊತ್ತಿಲ್ಲ. ಅದರ ಕ್ವಾಲಿಟಿ ಸರಿಯಾಗಿಲ್ಲ. ಮೂರನೆದಯಾಗಿ ಈ ಆಗ್ರೋ ಇಂಡಸ್ಟ್ರೀಸ್ ಸಂಸ್ಥೆಯವರು ನಮ್ಮ ರಾಜ್ಯದಲ್ಲಿ ಕೆಲವು ಕಡೆ ಮಾಡಿದರು. ಗುಲ್ಬರ್ಗಾದಲ್ಲಿ ಕೋಲಾರದಲ್ಲಿ ಮಾಡಿದರು. ಅವರು ಮಾಡಿದ್ದರಲ್ಲಿ ಒಂದು ಟೆಸ್ಟ್ ಕೂಡ ಫೇಲಾಗುತ್ತಿರಲಿಲ್ಲ. inseminate ಮಾಡಿದರೆ ಇಮ್ಮೀಡಿಯೆಟ್ ಕನ್ಸೀವ್ ಆಗುತ್ತಿದೆ. ನಮ್ಮ ರೈತರಿಗೆ ಲಾಸ್ ಆಗುವುದೇ ರಿಪೀಟ್ ಆಗುವುದರಿಂದ ಕ್ವಾಲಿಟಿ ಸೆಮನ್ನು ಕೊಡತಕ್ಕಂಥದ್ದು ಮತ್ತು ಆ training ಮಾಡತಕ್ಕಂಥದ್ದನ್ನು correct ಮಾಡಿ.

ಶ್ರೀ ಹೆಚ್. ಶಿವಪ್ಪ : ಅಧ್ಯಕ್ಷರೇ, ಇದರ ಜೊತೆಗೆ ಆ ಸೆಮನ್ ಡ್ರಾ ಮಾಡುತ್ತಾರಲ್ಲ, ಆ ಹುಲ್ಲು whether it is potent or not ಎಂದು ಹೇಳಬೇಕು.

ಅಧ್ಯಕ್ಷರು : ಛೇ, ಛೇ ಆ ರೀತಿ ಮಾಡುವುದಿಲ್ಲ.

ಶ್ರೀ ಎಸ್. ರಾಜಣ್ಣ (ಆಲಸೂರು) : ಮಾನ್ಯ ಅಧ್ಯಕ್ಷರೇ, ಒಂದೇ ಒಂದು ಕ್ವಾರಿಫೀಕೇಶನಗೆ ನಾನು ಸರ್ಕಾರದ ಪರವಾಗಿ ಉತ್ತರ ಕೊಡುತ್ತೇನೆ. ಕೃತಕ ಗರ್ಭಧಾರಣೆ ವಿಷಯ ಬಹಳ ಪ್ರಮುಖವಾದದ್ದು. The artificial insemination is very important to the farmers. ಏಕೆ ಇದರಲ್ಲಿ ನಾಲ್ಕೈದು ಬಾರಿ ಮಿಸ್ ಆಗುತ್ತದೆಂದರೆ ಪ್ರಥಮವಾಗಿ whether they are preserving properly in a correct temperature, that is important, i.e., O or minus degree.

ಸಪ್ಲೋಸ್ ಕರೆಂಟ್ ಹೋದರೆ ಆ ಫ್ರಿಜ ಕೂಲರ್‌ನಲ್ಲಿ ಆಲ್ಟರ್‌ನೇಟಿವ್ ಜನರೇಟ್ ವ್ಯವಸ್ಥೆಯನ್ನು ಮಾಡಿದ್ದಾರೆಯೇ ಎಂಬುದು ಮುಖ್ಯವಾದುದು. ಇದಾದ ನಂತರ then the person who carries it from the cooler to the village. whether he carries it properly to the village with the same temperature. that is also important and the person who insert the semen inside. whether he puts his hand properly inside the stomach properly is also important. ಈತ ಹತ್ತಾರು ಬಾರಿ ಹಸುವನ್ನು ಹೊಡೆದುಕೊಂಡು ಬರಬೇಕಾಗುತ್ತದೆ. ಅದು ಗೊಡ್ಡಾಗಿ ಬಿಡುತ್ತದೆ. ಈ ವಿಚಾರಗಳೆಲ್ಲಾ ಬಹಳ ಪ್ರಮುಖವಾದುದು. ನಾನು ಹೇಳಿದ ರೀತಿಯಲ್ಲಿ ಎಲ್ಲವೂ ಸರಿಯಾಗಿದ್ದರೆ there is no chance of repeating.

ಅಧ್ಯಕ್ಷರು : ಸೆಮನ್ ವಿಚಾರ ನನಗೆ ಗೊತ್ತಿದೆ.

ಶ್ರೀ ಕಾಂತ ರುದ್ರಪ್ಪ ಅಂಬಡಗಟ್ಟಿ : ಮಾನ್ಯ ಅಧ್ಯಕ್ಷರೇ, ಅವರು 5 ರೂ.ಗಳನ್ನು ಛಾರ್ಜ್ ಮಾಡುವ ಬಗ್ಗೆ ರೈತರಿಗೆ ತೊಂದರೆ ಏನೂ ಇಲ್ಲ. ಆದರೆ ವೆಟರ್ನರಿ ಸರ್ವೀಸಸ್‌ನಲ್ಲಿರುವ ಸರ್ಕಾರಿ ಅಧಿಕಾರಿಗಳು ಸರಿಯಾಗಿ ಕಾರ್ಯ ನಿರ್ವಹಿಸದೇ ಅವರ ನಿರ್ಲಕ್ಷ್ಯತನದಿಂದ ಈ ರೀತಿಯಾಗುತ್ತಿದೆ. ಅದಕ್ಕೋಸ್ಕರ ಅಂಥ ಅಧಿಕಾರಿಗಳ ಮೇಲೆ ಕ್ರಮ ಜರುಗಿಸುತ್ತಾರೆಯೇ?

ಅಧ್ಯಕ್ಷರು : ನಾನು ಹೇಳಿದ್ದನ್ನು ನೀವು ಯಾರೂ ಸರಿಯಾಗಿ ಕೇಳಿಸಿಕೊಳ್ಳುವುದೇ ಇಲ್ಲ. ಈಗಾಗಲೇ ನಿಮ್ಮೆಲ್ಲರ ಪರವಾಗಿ ಸರ್ಕಾರಕ್ಕೆ ಸೂಚನೆಯನ್ನು ಕೊಟ್ಟಿದ್ದೇನೆ.

ಶ್ರೀ ಸಿ. ಭೈರೇಗೌಡ : ರಾಜಣ್ಣನವರು ಸ್ವತಃ ಡೈರಿ ಇಟ್ಟಿರುವವರು. ಅವರು ಸಗಣಿ ಉಪಯೋಗದ ಬಗ್ಗೆ ಚೆನ್ನಾಗಿ ಹೇಳಿದ್ದಾರೆ.

ಶ್ರೀ ಎನ್. ರಾಜಣ್ಣ : ಸಗಣಿಯನ್ನು ಸರಿಯಾಗಿ ಉಪಯೋಗ ಮಾಡಿದರೆ ಕೋಟ್ಯಾಂತರ ರೂ.ಗಳನ್ನು ಉಳಿಸಬಹುದು. ಸಗಣಿ ಮತ್ತು ಮಣ್ಣು ಬೆರೆತರೆ ಅದರಲ್ಲಿ 9 ವಿಟಮಿನ್ಸ್ ಇರುತ್ತದೆ. It keeps him perfectly throughout his life

ಅಧ್ಯಕ್ಷರು : ಹೌದು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ ವಿಧಾನ ಸಭಾಕ್ಷೇತ್ರ) : ಮಾನ್ಯ ಅಧ್ಯಕ್ಷರೇ, ಸೆಮನ್ನ ಕೊಡಿಸುವ ವಿಚಾರದಲ್ಲಿ ಏಕೆ ಫೇಲ್ಯೂರ್ ಆಗುತ್ತಿದೆಯೆಂದರೆ ನಾವು ಸರಿಯಾಗಿ ಹಸುವನ್ನು ಹೊಡೆದುಕೊಂಡು ಬರುವುದಕ್ಕೆ ಸಂಬಂಧಪಟ್ಟಂತೆ ಸರಿಯಾದ ತರಬೇತಿಯನ್ನು ಕೊಡಬೇಕಾಗುತ್ತದೆ. ಇದು ಲೈಂಗಿಕತೆಯ ವಿಚಾರವಾಗಿದ್ದು ಇದನ್ನು ಚರ್ಚೆ ಮಾಡದೇ ಇರುವುದರಿಂದ ಈ ರೀತಿಯ ಅನಾಹುತಗಳು ಆಗುತ್ತವೆ. ಸೆಮನ್ಸ್ ಟ್ಯೂಬ್‌ನಲ್ಲಿ ಮುತುವರ್ಜಿ ವಹಿಸಬೇಕು. ಒಂದು ಹಸುವಿಗೆ ಮುಂಬೆದೆ ಹಿಂಬೆದೆ ಮತ್ತು ಮಧ್ಯದ ಬೆದೆ ಎಂದು ಮೂರು ರೀತಿಯಲ್ಲಿ ಇರುತ್ತವೆ. ಆ ಮೂರು ರೀತಿಯವುಗಳನ್ನು ಸರಿಯಾದ ರೀತಿಯಲ್ಲಿ ಪರೀಕ್ಷೆ ಮಾಡಿ, ಆ ಟೈಮಿಗೆ ಸರಿಯೊಗಿ ಹಸುವನ್ನು

ಹೊಡೆದುಕೊಂಡು ಬಂದು ಸೆಮನ್ಸ್‌ಕೊಡಿಸಿದರೆ ಆಗ ಫಲ ಕಟ್ಟುತ್ತದೆ. ಆದರೆ ಇಲ್ಲೇನಾಗಿದೆಯೆಂದರೆ ಹಳ್ಳಿಗಳಲ್ಲಿ ಹೆಚ್ಚಾಗಿ ಮಹಿಳೆಯರೇ ಹಸು, ದನಗಳನ್ನು ನೋಡಿಕೊಳ್ಳುವುದರಿಂದ ಅವರು ಈ ಲೈಂಗಿಕತೆಯ ವಿಚಾರದ ಬಗ್ಗೆ ಹೆಚ್ಚು ಮಾತನಾಡದೇ ಇರುವುದರಿಂದ ಈ ರೀತಿಯಲ್ಲಿ ನಾಲ್ಕೈದು ಸಾರಿ ಸೆಮನ್ಸ್ ಕೊಡಿಸತಕ್ಕಂಥದ್ದರಲ್ಲಿ ಫೇಲ್ಯೂರ್ ಆಗುತ್ತದೆ. ಆದುದರಿಂದ ಕೆ.ಎಂ.ಎಫ್.ನವರು ಮತ್ತು ವೆಟರ್ನರಿ ಸರ್ವೀಸಸ್‌ನಲ್ಲಿರುವವರು ಇಬ್ಬರೂ ಸೇರಿ ಈ ಬಗ್ಗೆ ತರಬೇತಿಯನ್ನು ಕೊಟ್ಟು ಹಸುವನ್ನು ಯಾವ ಸಮಯದಲ್ಲಿ ಸೆಮನ್ಸ್‌ಗಾಗಿ ಹೊಡೆದುಕೊಂಡು ಬರಬೇಕು ಎಂಬ ಲೈಂಗಿಕತೆಯ ವಿಚಾರಕ್ಕೆ ಸಂಬಂಧಪಟ್ಟಂತೆ ತರಬೇತಿಯನ್ನು ಕೊಟ್ಟರೆ, ಆಗ ಇದು ಸಕ್ಸಸ್ ಆಗುತ್ತದೆ. ಇಲ್ಲದೇ ಇದ್ದರೆ ನಾಲ್ಕೈದು ಬಾರಿ ಸೆಮನ್ಸ್ ಕೊಡಿಸಿದರೂ ಫೇಲ್ಯೂರ್ ಆಗುತ್ತದೆ. ಇದರಿಂದಾಗಿಯೇ ರೈತರು ಹಸುವನ್ನು ಹೋರಿಗೆ ಕೊಡಿಸುವುದೇ ಒಳ್ಳೆಯದೆಂದು ಆ ಕಡೆಗೆ ಹೆಚ್ಚು ಹೋಗುತ್ತಿದ್ದಾರೆ. ಆದುದರಿಂದ ಈ ವಿಚಾರದ ಬಗ್ಗೆ ಮುಕ್ತವಾಗಿ ಚರ್ಚೆ ಮಾಡಬೇಕು.

ಶ್ರೀ ಬಿ.ಬಿ. ನಿಂಗಯ್ಯ (ಪಶು ಸಂಗೋಪನಾ ಸಚಿವರು) : ಅಧ್ಯಕ್ಷರೇ, ಅವರ ಮಾತನ್ನು ಒಪ್ಪುತ್ತೇನೆ. ಏಕೆಂದರೆ ಇದು ಉತ್ತಮವಾದ ಸಲಹೆಯಾಗಿದೆ. ಇದೊಂದೇ ಕಾರಣವಲ್ಲದೇ ಉತ್ತಮವಾದ ಪೌಷ್ಠಿಕ ಆಹಾರದ ಕೊರತೆ ಕೂಡ ಸೆಮನ್ಸ್ ಫೇಲ್ಯೂರ್ ಆಗುವುದಕ್ಕೆ ಕಾರಣವಾಗಿದೆ. ಬಹುಶಃ ಇವೆಲ್ಲಾ ಕಾರಣಗಳೂ ಇರುತ್ತವೆ. ಈಗಾಗಲೇ ನಾನು ಹಿರಿಯ ಅಧಿಕಾರಿಗಳ ಜೊತೆ, ಕೆ.ಎಂ.ಎಫ್. ನವರ ಜೊತೆ ಚರ್ಚೆ ಮಾಡಿದ್ದೇನೆ. ಇದರ ಬಗ್ಗೆ ನಾನು ತಕ್ಷಣ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತೇನೆ.

(ಊ) ಉಚಿತ ನೇತ್ರ ಚಿಕಿತ್ಸಾ ಸಂದರ್ಭದಲ್ಲಿ ವೈದ್ಯರ ನಿರ್ಲಕ್ಷ್ಯದಿಂದ ಶಿರಾದಲ್ಲಿ ಮೂವರು ಸಾವು ಮತ್ತು 42 ಜನರು ತಮ್ಮ ಕಣ್ಣುಗಳನ್ನು ಕಳೆದುಕೊಂಡಿರುವ ಬಗ್ಗೆ.

ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ ವಿಧಾನ ಸಭಾಕ್ಷೇತ್ರ) : ಮಾನ್ಯ ಅಧ್ಯಕ್ಷರೇ, ಎರಡು ತಿಂಗಳ ಹಿಂದೆ ಉಚಿತ ನೇತ್ರ ಶಸ್ತ್ರ ಚಿಕಿತ್ಸೆಯನ್ನು ಮಾಡುವಂಥ ಸಂದರ್ಭದಲ್ಲಿ ಶಿರಾದಲ್ಲಿ ಮೂವರು ಸತ್ತಿದ್ದು ಸುಮಾರು 42ಕ್ಕೂ ಹೆಚ್ಚು ಜನರು ತಮ್ಮ ಕಣ್ಣುಗಳನ್ನು ಕಳೆದುಕೊಂಡಿದ್ದಾರೆ. ಈ ವಿಷಯ ಪ್ರಸ್ತಾಪವಾದ ಸಂದರ್ಭದಲ್ಲಿ ಕಣ್ಣನ್ನು ಕಳೆದುಕೊಂಡ ಜನರು ಆಸ್ಪತ್ರೆಯ ಮುಂದೆ ಬಂದು ತಮ್ಮ ದುಃಖವನ್ನು ಗೋಗರೆದುಕೊಂಡು ಹೇಳುತ್ತಿದ್ದರೂ ಕೂಡ, ನಿಮ್ಮ ವೈದ್ಯಾಧಿಕಾರಿಗಳು ಯಾರೂ ಕೂಡ ತಮ್ಮ ಗಮನಕ್ಕೆ ಇದನ್ನು ತೆಗೆದುಕೊಳ್ಳಲಿಲ್ಲ. ಈ ಜನಗಳಿಗೆ ಶುಶ್ರೂಷೆಯನ್ನು ಕೊಡತಕ್ಕಂಥ ಪ್ರಯತ್ನವನ್ನೂ ಕೂಡ ಮಾಡಲಿಲ್ಲ. ಈ ವಿಚಾರ ಅನೇಕ ಪತ್ರಿಕೆಗಳಲ್ಲಿ ಬಂದ ಮೇಲೆ ಮತ್ತು ಅನೇಕ ಸಭೆ, ಸಮಾರಂಭಗಳಲ್ಲಿ ಪ್ರಸ್ತಾಪವಾದ ಮೇಲೆ ನೀವು ತಜ್ಞರ ಸಮಿತಿಯನ್ನು ಕಳುಹಿಸಿದಿರಿ. ಆ ಸಮಿತಿ ಕೊಟ್ಟ ವರದಿಯಲ್ಲಿ ಹೇಳಿದ ಸಲಹೆಯಂತೆ ಕೂಡ ನಂತರ ಆ ಜನಗಳಿಗೆ ಟ್ರೀಟ್‌ಮೆಂಟ್ ಕೊಡಲಿಲ್ಲ. ಇದೊಂದು ದೊಡ್ಡ ದುರಂತವಾಗಿದೆ. ಈಗಾಗಲೇ ಮೂವರು ಸತ್ತಿದ್ದು ಸಣ್ಣ ವಯಸ್ಸಿನವರೂ ಸೇರಿದಂತೆ 42 ಜನರು ಕಣ್ಣುಗಳನ್ನು ಕಳೆದುಕೊಂಡಿರುವಂಥ ಪರಿಸ್ಥಿತಿ ಇರುವಾಗ, ಇಂಥವರಿಗೆ ಏನಾದರೂ ಪರಿಹಾರವನ್ನು ಕೊಡತಕ್ಕಂಥ ಕೆಲಸವನ್ನು ಮಾಡಬೇಕು. ನಾನೂ ಕೂಡ ವೈಯಕ್ತಿಕವಾಗಿ